## ಸಂಪಾದಕೀಯ

# ರಾಮಕೃಷ್ಣಾವತಾರದ ಮೂರು ಮುಖಗಳು-೨

ಕಾಲದ ದೃಷ್ಟಿಯಿಂದ ನೋಡಿದಾಗ ಶ್ರೀರಾಮಕೃಷ್ಣರು ಪುರಾತನ ಧರ್ಮವನ್ನೂ ಶ್ರೀಮಾತೆ ಶಾರದಾದೇವಿಯವರು ವರ್ತಮಾನ ಧರ್ಮವನ್ನೂ ಸ್ವಾಮಿ ವಿವೇಕಾನಂದರು ಭವಿಷ್ಯ ಧರ್ಮವನ್ನೂ ಪ್ರತಿನಿಧಿಸುತ್ತಾರೆ ಎಂಬುದನ್ನು ನೋಡಿದೆವು. ಈಗ ಇನ್ನೊಂದು ದೃಷ್ಟಿಯಿಂದ ಈ ಮೂವರು ಮಹಾಪುರುಷರ ಜೀವನ-ಸಂದೇಶವನ್ನು ನೋಡಲು ಪ್ರಯತ್ನಿಸೋಣ.

**ಧರ್ಮದ ಮೂರು ಮುಖ್ಯ ತಳಹದಿಗಳು**

ಧರ್ಮಕ್ಕೆ ಮೂರು ಮುಖ್ಯ ತಳಹದಿಗಳಿವೆ: ಶ್ರುತಿ,ಯುಕ್ತಿ ಮತ್ತು ಅನುಭೂತಿ. ಪ್ರತಿಯೊಂದು ಧರ್ಮಕ್ಕೂ ಒಂದು ಮೂಲ ಶಾಸ್ತ್ರಾಧಾರವಿರುತ್ತದೆ, ಅದನ್ನೇ ನಾವು ಶ್ರುತಿ ಎಂದು ಕರೆಯುವುದು. ಹಿಂದೂಧರ್ಮಕ್ಕೆ ವೇದಗಳು, ಕ್ರೈಸ್ತಧರ್ಮಕ್ಕೆ ಬೈಬಲ್ ಮತ್ತು ಇಸ್ಲಾಂ ಧರ್ಮಕ್ಕೆ ಕೊರಾನ್ ಈ ರೀತಿ ಶಾಸ್ತ್ರಾಧಾರಗಳಾಗಿವೆ. ಈ ಶಾಸ್ತ್ರಗಳು ಆಯಾಯ ಧರ್ಮದ ಮೂಲಭೂತ ತತ್ತ್ವಗಳನ್ನು ಹೊಂದಿರುತ್ತವೆ. ಈ ತತ್ತ್ವಗಳಿಗೆ ಒಂದು ವೈಚಾರಿಕ ಚೌಕಟ್ಟನ್ನು ಒದಗಿಸುವುದೇ ಯುಕ್ತಿ. ಈ ತತ್ತ್ವಗಳು ಬೌದ್ಧಿಕವಾಗಿ ಸ್ವೀಕೃತವಾಗುವಂತೆ ಮಾಡುತ್ತದೆ ಯುಕ್ತಿ—ತಾರ್ಕಿಕಸಮರ್ಥನೆಯನ್ನು ನೀಡುವುದರ ಮೂಲಕ. ಯುಕ್ತಿಯ ಮೂಲಕ ಈ ತತ್ತ್ವಗಳನ್ನು ಮನನ ಮಾಡುತ್ತ ಹೋದಂತೆಲ್ಲ ಅವುಗಳ ವಿಷಯದಲ್ಲಿ ವಿಶ್ವಾಸ ದೃಢವಾಗುತ್ತದೆ. ಆದರೆ ಕೇವಲ ದೃಢವಿಶ್ವಾಸವಿದ್ದರೆ ಸಾಲದು, ನಾವೂ ಆ ತತ್ತ್ವಗಳನ್ನು ಅನುಭವಿಸಬೇಕು, ನಮ್ಮ ಜೀವನದೊಡನೆ ಅವು ಒಂದಾಗಬೇಕು. ಇದಕ್ಕೆ ಅನೇಕ ಆಧ್ಯಾತ್ಮಿಕ ಸಾಧನೆಗಳಲ್ಲಿ ನಮ್ಮ ಜೀವನವನ್ನು ತೊಡಗಿಸಬೇಕು. ಇದು ಧರ್ಮದ ಆನುಷ್ಠಾನಿಕ ಅಂಶ ಮತ್ತು ಇದನ್ನೇ **ಅನುಭೂತಿ** ಎಂದು ಕರೆಯುವುದು.

> **ಭಗವಾನ್ ಶ್ರೀರಾಮಕೃಷ್ಣರು ಹಿಂದೆ ಅವತರಿಸಿದ ಯುಗಪ್ರವರ್ತಕ ಸಮೂಹದ ಪುನಃಸಂಸ್ಕೃತ ಮಹಾಪ್ರಕಾಶವಾಗಿರುತ್ತಾರೆ.**
>
> **— ಸ್ವಾಮಿ ವಿವೇಕಾನಂದ**

ವೇದಾಂತಕ್ಕೆ ಸಂಬಂಧಪಟ್ಟಂತೆ ಉಪನಿಷತ್ತುಗಳು ಶ್ರುತಿ, ಬ್ರಹ್ಮಸೂತ್ರಗಳು ಯುಕ್ತಿ ಮತ್ತು ಭಗವದ್ಗೀತೆ ಅನುಭೂತಿ. ಉಪನಿಷತ್ತುಗಳಲ್ಲಿ ಆತ್ಯಂತಿಕ ಸತ್ಯದ ಸ್ವರೂಪ, ಜೀವಾತ್ಮ-ಪರಮಾತ್ಮರ ಸಂಬಂಧ, ಸೃಷ್ಟಿತತ್ತ್ವ ಇವೇ ಮುಂತಾದ ತಾತ್ತ್ವಿಕ ಭಾವನೆಗಳಿವೆ. ಉಪನಿಷತ್ತಿನ ಈ ಭಾವನೆಗಳನ್ನು ತೆಗೆದುಕೊಂಡು ಬ್ರಹ್ಮಸೂತ್ರಗಳು ಅವಕ್ಕೆ ಯುಕ್ತಿಯ ಹಿನ್ನೆಲೆಯನ್ನು ಒದಗಿಸುತ್ತವೆ, ಎಲ್ಲ ಆಕ್ಷೇಪಣೆಗಳಿಗೂ ಉತ್ತರವನ್ನು ನೀಡಿ ಆ ತತ್ತ್ವಗಳನ್ನು ತಾರ್ಕಿಕವಾಗಿ ಸಮರ್ಥಿಸುತ್ತವೆ. ಆ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಧನೆಗಳ ಮೂಲಕ ಆಧ್ಯಾತ್ಮಿಕ ಅನುಭವವನ್ನು ಪಡೆಯುವ ವಿಚಾರವನ್ನು ಭಗವದ್ಗೀತೆ ಒಳಗೊಂಡಿದೆ.

ಇದೇ ವಿಷಯವನ್ನು ರಾಮಕೃಷ್ಣಾವತಾರಕ್ಕೆ ಅನ್ವಯಿಸಿದರೆ, ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಮತ್ತು ಶ್ರೀಶಾರದಾದೇವಿಯವರು ಕ್ರಮವಾಗಿ ಶ್ರುತಿ, ಯುಕ್ತಿ ಮತ್ತು ಅನುಭೂತಿ ಇವುಗಳನ್ನು ಪ್ರತಿನಿಧಿಸುತ್ತಾರೆ ಎನ್ನಬಹುದು. ಶ್ರೀರಾಮಕೃಷ್ಣರ ಜೀವನ ವೇದ ವೇದಾಂತಗಳಿಗೆ ಬರೆದ ಜೀವಂತ ಭಾಷ್ಯದಂತಿದೆ ಎಂದು ವಿವೇಕಾನಂದರು ಹೇಳುತ್ತಾರೆ. ಅನೇಕ ರೀತಿಯ ಸಾಧನೆಗಳ ಮೂಲಕವೂ ವೈವಿಧ್ಯಮಯ ಅನುಭವಗಳ ಮೂಲಕವೂ ಶ್ರೀರಾಮಕೃಷ್ಣರು ಶಾಸ್ತ್ರಗಳ ಯಥಾರ್ಥತೆಯನ್ನು ಸಮರ್ಥಿಸಿದರು. ಹಿಂದಿನ ಆಚಾರ್ಯರು ಶಾಸ್ತ್ರಗಳಿಗೆ ವೈಚಾರಿಕ ಸಮರ್ಥನೆಯನ್ನು ನೀಡಿದರೆ ಶ್ರೀರಾಮಕೃಷ್ಣರು ಅನುಭಾವಿಕ ಸಮರ್ಥನೆಯನ್ನು ನೀಡಿದರು. ಹೀಗೆ ಅವರು ಶ್ರುತಿಯ ಒಂದು ಜೀವಂತ ರೂಪವೇ ಆಗಿ ನಮಗೆ ಕಂಡು ಬರುತ್ತಾರೆ. ಹಿಂದಿನ ಎಲ್ಲ ಅವತಾರ ಪುರುಷರ ಬೋಧನೆಯ ಸಾರಸರ್ವಸ್ವವೂ ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಅಡಕವಾಗಿದೆ.

ಇಷ್ಟೇ ಅಲ್ಲದೆ ಅವರ ಉಪದೇಶಗಳೇ ಒಂದು ಆಧುನಿಕ ಶ್ರುತಿಯಂತೆ ಆದರಣೀಯವಾಗಿವೆ.ಅಸಂಖ್ಯ ಭಕ್ತರು "ಶ್ರೀರಾಮಕೃಷ್ಣ ವಚನವೇದ"ವನ್ನು ನಿತ್ಯ ಪಾರಾಯಣ ಮಾಡುತ್ತಾರೆ, ಅದರಲ್ಲಿ ಬರುವ ಪ್ರತಿಯೊಂದು ಮಾತಿನಲ್ಲೂ ಶ್ರುತಿವಾಕ್ಯದಷ್ಟೇ ಶ್ರದ್ಧೆ ಅವರಿಗೆ. ಶ್ರೀ ಕುವೆಂಪು ಅವರು ಹೇಳುವಂತೆ, "ಈ 'ವಚನವೇದ' ವೇದಗಳೂ ಮಾಡದ ಕೆಲಸವನ್ನು ಮಾಡುತ್ತದೆ. ಈ 'ವಚನವೇದ' ವೇದಗಳೂ ಹೋಗಲಾರದ, ಬಹುಶಃ ಕೆಲವರ ದೃಷ್ಟಿಯಲ್ಲಿ ಹೋಗಬಾರದ, ಮೂಲೆಮೂಲೆಗಳನ್ನೂ ಪ್ರವೇಶಿಸಿ ಜ್ಯೋತಿರ್ದಾನ ಮಾಡುತ್ತದೆ."

ಸ್ವಾಮಿ ವಿವೇಕಾನಂದರು ತಮ್ಮ ಅಸಾಧ್ಯ ಬುದ್ಧಿಶಕ್ತಿ, ತೀಕ್ಷ್ಣ ವಿಶ್ಲೇಷಣೆ, ವೈಚಾರಿಕ ದೃಷ್ಟಿಕೋನ ಮತ್ತು ಅಪಾರ

ಜ್ಞಾನಸಂಪತ್ತು ಇವುಗಳ ಮೂಲಕ ಶ್ರೀರಾಮಕೃಷ್ಣರ ಉಪದೇಶಗಳಿಗೆ, ಆಧುನಿಕಯುಗಕ್ಕೆ ಸಮ್ಮತವಾಗುವ ಮತ್ತು ವೇದಾಂತಕ್ಕೆ ವಿರುದ್ಧವಾಗದ, ಒಂದು ಹೊಸ ವ್ಯಾಖ್ಯಾನವನ್ನು ನೀಡಿದರು. ವಿವೇಕಾನಂದರು ಇಲ್ಲದೆ ಇದ್ದಿದ್ದರೆ ಬಹುಶಃ ಶ್ರೀರಾಮಕೃಷ್ಣರು ಒಬ್ಬ ಸಾಮಾನ್ಯ ಸಂತರಾಗಿ ಉಳಿದುಬಿಡುತ್ತಿದ್ದರೇನೊ. ಅವರ ಜೀವನ ಮತ್ತು ಸಂದೇಶಗಳಿಗೆ ಆಧುನಿಕ ಮತ್ತು ಜಾಗತಿಕ ಮಹತ್ವವಿದೆ ಎಂಬುದನ್ನು ಕಂಡುಕೊಂಡವರು ಸ್ವಾಮಿ ವಿವೇಕಾನಂದರು. ಶ್ರೀರಾಮಕೃಷ್ಣರ ಉಪದೇಶಗಳು ಜಗತ್ತಿನ ಚಿಂತನಾಸ್ತರದ ಮೇಲೆ ಪರಿಣಾಮ ಉಂಟುಮಾಡುವಂತೆ ಮಾಡಿದುದು ಮಾತ್ರವಲ್ಲದೆ, ವಿವೇಕಾನಂದರು ಅವು ಕ್ರಿಯಾರೂಪದಲ್ಲೂ ವ್ಯಕ್ತವಾಗುವಂತೆ ಮಾಡಿದರು. ಸ್ವಾಮಿ ಶಾರದಾನಂದರು ಹೇಳುತ್ತಾರೆ: "ನರೇಂದ್ರನಲ್ಲದೆ ಮತ್ತಾರಿಗೂ ಶ್ರೀರಾಮಕೃಷ್ಣರ ಮಾತುಗಳ ಮತ್ತು ಅಲೌಕಿಕ ಕೃತಿಗಳ ಗೂಢಾರ್ಥವನ್ನು ಅರ್ಥ ಮಾಡಿಕೊಂಡು ಅವುಗಳಿಗೆ ವ್ಯಾಖ್ಯಾನ ನೀಡುವ ಸಾಮರ್ಥ್ಯ ಇರಲಿಲ್ಲ. ಆ ಸಂದರ್ಭದಲ್ಲಿಯೇ ನರೇಂದ್ರನ ಮೂಲಕ ಶ್ರೀರಾಮಕೃಷ್ಣರ ಮಾತುಗಳನ್ನು ಕೇಳಿ ನಮಗೆ ಅತ್ಯಾಶ್ಚರ್ಯವಾಗುತ್ತಿತ್ತು. 'ಹಾ! ನಾವು ಕೂಡ ಶ್ರೀರಾಮಕೃಷ್ಣರಿಂದ ಈ ಮಾತುಗಳನ್ನು ಕೇಳಿರುವೆವು. ಆದರೆ ಅವುಗಳಿಗೆ ಇಷ್ಟೊಂದು ಆಳವಾದ ಅರ್ಥವಿದೆ ಎಂಬುದು ತಿಳಿಯಲೇ ಇಲ್ಲವಲ್ಲ!' ಎಂದು ನಾವು ಭಾವಿಸುತ್ತಿದ್ದೆವು" (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಉತ್ತರಾರ್ಧ, ಪು. ೩೩೮). ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವದಿಂದ ಕೂಡಿದ ನರೇಂದ್ರನಾಥನು ಶ್ರೀರಾಮಕೃಷ್ಣರ ಶಿಷ್ಯರಾದುದೇ ಅವರ ಜೀವನ-ಸಂದೇಶಗಳಿಗೆ ಒಂದು ಯುಕ್ತಿಯ ಹಿನ್ನೆಲೆಯನ್ನು ಒದಗಿಸಿದಂತಾಯಿತು.

ಧರ್ಮತತ್ತ್ವವನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಬಾಳುವುದು ಶ್ರೀಮಾತೆ ಶಾರದಾದೇವಿಯವರ ಪಾಲಿನದಾಗಿತ್ತು. ಶ್ರೀರಾಮಕೃಷ್ಣರು ಉನ್ನತ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದರು, ಮತ್ತು ಅನಂತರ ಭಕ್ತರಿಗೆ ಬೋಧಿಸುವುದು ಹಾಗೂ ಶಿಷ್ಯರ ತರಬೇತಿ ಇವುಗಳಲ್ಲೇ ತಮ್ಮ ಜೀವನವನ್ನು ಸವೆಸಿದರು. ವಿವೇಕಾನಂದರು ಜಗತ್ತಿನಾದ್ಯಂತ ಧರ್ಮ ಪ್ರಚಾರಕ್ಕಾಗಿ ಮತ್ತು ಸಂಸ್ಥೆಯನ್ನು ಕಟ್ಟುವುದಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿರಿಸಿದರು. ಆದರೆ ಶ್ರೀಮಾತೆಯವರು ಮಾತ್ರ ಅತ್ಯಂತ ಕಷ್ಟಕರ ಕೌಟುಂಬಿಕ ಸನ್ನಿವೇಶದಲ್ಲಿ ಬಾಳುತ್ತಾ, ಸಂಸಾರದಲ್ಲೇ ಧರ್ಮಜೀವನ ನಡೆಸುವುದು ಹೇಗೆಂಬುದನ್ನು ತೋರಿಸಿಕೊಟ್ಟರು. ಅವರು ಅನುಷ್ಠಾನ ವೇದಾಂತದ ಜೀವಂತ ಪ್ರತೀಕವಾಗಿದ್ದರು.

ನಾವು ಕಷ್ಟಕರ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಬಹುದು, ಅದ್ಭುತ ತಪಸ್ಸನ್ನಾಚರಿಸಬಹುದು. ಆದರೆ ಜನರೊಡನಿದ್ದು, ವಿರುದ್ಧ ಸನ್ನಿವೇಶಗಳಲ್ಲಿ ನಮ್ಮ ಆಧ್ಯಾತ್ಮಿಕ ಭಾವವನ್ನು ಉಳಿಸಿಕೊಂಡು ಬಾಳುವುದು ನಿಜವಾಗಿಯೂ ಮಹಾ ತಪಸ್ಸು. ಇದನ್ನು ಸಾಧಿಸಿ ತೋರಿಸಿ ಶ್ರೀಮಾತೆಯವರು ಆಧುನಿಕ ಸನ್ನಿವೇಶಕ್ಕೆ

**ಶ್ರೀಮಾತೆಯವರು ಈ ರೀತಿ ಪರಿಶ್ರಮ ಪಡುತ್ತಿರುವುದು ಗೃಹಸ್ಥರಿಗೆ ಅವರ ಗೃಹಸ್ಥಧರ್ಮವನ್ನು ಕಲಿಸಿಕೊಡುವುದಕ್ಕಾಗಿ.**

— *ಸ್ವಾಮಿ ಪ್ರೇಮಾನಂದ.*

ಹೊಂದಿಕೆಯಾಗುವ ಧರ್ಮಾನುಷ್ಠಾನ ವಿಧಾನವನ್ನು ತಿಳಿಯಪಡಿಸಿರುವುದು. ಶ್ರೀಮಾತೆ ಯವರೊಡನಿದ್ದ, ಅವರ ಶಿಷ್ಯರಾದ ಸ್ವಾಮಿ ಶಾರದೇಶಾನಂದರು ಹೇಳುತ್ತಾರೆ:

"ಶ್ರೀಮಾತೆಯವರು ವಾಸಿಸುತ್ತಿದ್ದ ಸ್ಥಳ ಪೂಜಾಮಂದಿರವೂ, ಒಂದು ಶಾಲೆಯೂ, ದೀನದಲಿತರ ಸೇವೆ ನಡೆಯುವ ಆಶ್ರಮವೂ ಆಗಿತ್ತು. ಅವರ ನಿಕಟವರ್ತಿಗಳಿಗೆ ತಿಳಿದುಬರುತ್ತಿತ್ತು, ಅವರು ನಿರಂತರ ಭಗವಂತನ ಸ್ಮರಣೆ ಮಾಡುತ್ತಿರುವರು ಮತ್ತು ಎಲ್ಲ ಸಂದರ್ಭಗಳಲ್ಲಿಯೂ ಅವನನ್ನೇ ಆಶ್ರಯಿಸುತ್ತಿದ್ದರು ಎಂದು," (*The Mother As I Saw Her* p. 213). ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸುತ್ತಾನೆ, ಮಾಮನುಸ್ಮರ ಯುದ್ಧ್ಯ ಚ—"ನನ್ನನ್ನು ಸ್ಮರಿಸುತ್ತ (ಜೀವನ) ಹೋರಾಟವನ್ನು ನಡೆಸು" ಎಂದು. ಶ್ರೀಮಾತೆಯವರ ಜೀವನ ಭಗವದ್ಗೀತೆಯ ಈ ಸಂದೇಶವನ್ನೇ ಪ್ರತಿಬಿಂಬಿಸುತ್ತದೆ.

ಮೂರು ಮುಖ್ಯ ಆಧ್ಯಾತ್ಮಿಕ ಸಾಧನೆಗಳು:

ಭಕ್ತಿ, ಕರ್ಮ ಮತ್ತು ಜ್ಞಾನ ಇವು ಆಧ್ಯಾತ್ಮಿಕ ಸಾಧನೆಯ ಮೂರು ಮುಖ್ಯ ಅಂಶಗಳು. ಶ್ರೀಕೃಷ್ಣನು ಭಾಗವತದಲ್ಲಿ ಹೀಗೆ ಹೇಳುತ್ತಾನೆ:

ಯೋಗಾಸ್ತ್ರಯೋ ಮಯಾ ಪ್ರೋಕ್ತಾ
ನೃಣಾಂ ಶ್ರೇಯೋ ವಿಧಿತ್ಸಯಾ ।
ಜ್ಞಾನಂ ಕರ್ಮ ಚ ಭಕ್ತಿಶ್ಚ
ನೋಪಾಯೋಽನ್ಯೋಽಸ್ತಿ ಕುತ್ರಚಿತ್ ॥

"ಜನರಿಗೆ ಶ್ರೇಯಸ್ಸನ್ನು ಉಂಟುಮಾಡಲು ನಾನು ಜ್ಞಾನ, ಕರ್ಮ ಮತ್ತು ಭಕ್ತಿ ಎಂಬ ಮೂರು ಯೋಗಗಳನ್ನು ಹೇಳಿದ್ದೇನೆ. ಇವಲ್ಲದೆ ಬೇರೆ ಉಪಾಯಗಳಿಲ್ಲ." ಎಲ್ಲ ಸಾಧನಮಾರ್ಗಗಳನ್ನೂ ಈ ಮೂರು ಯೋಗಗಳ ಅಡಿಯಲ್ಲಿ ಸೇರಿಸಿಬಿಡಬಹುದು.

ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಗಳನ್ನು ನಾವು ಪರಿಶೀಲಿಸಿದಾಗ ಅವರು ಭಕ್ತಿಪ್ರಧಾನರೆಂಬುದು ನಮಗೆ ತಿಳಿದುಬರುತ್ತದೆ. ಎಲ್ಲ ಬಗೆಯ ಸಾಧನೆಗಳನ್ನು ಮಾಡಿದ್ದರೂ, ವೇದಾಂತದ ಜ್ಞಾನಮಾರ್ಗವನ್ನು ಅನುಸರಿಸಿದ್ದರೂ ಅವರು ಕೊನೆಯವರೆಗೂ ಜಗನ್ಮಾತೆಯ ಭಕ್ತರಾಗಿಯೇ ಉಳಿದರು ಮತ್ತು ಅವರ ಉಪದೇಶದ ಪ್ರಧಾನ ಸ್ವರವೂ ಭಕ್ತಿಯೇ ಆಗಿತ್ತು. ಕಲಿಯುಗದಲ್ಲಿ ನಾರದೀಯ

ಭಕ್ತಿಯೇ ಅತ್ಯಂತ ಸೂಕ್ತವಾದ ಮಾರ್ಗವೆಂದು ಅವರು ಬೋಧಿಸುತ್ತಿದ್ದರು. "ನನಗೆ ಸಕ್ಕರೆಯನ್ನು ಸವಿಯಬೇಕೆಂಬಾಸೆ, ಸಕ್ಕರೆಯಾಗುವ ಇಚ್ಛೆಯಿಲ್ಲ" ಎಂದು ಕೆಲವೊಮ್ಮೆ ಹೇಳುತ್ತಿದ್ದರು. "ತಾಯಿ, ನನಗೆ ಬ್ರಹ್ಮಜ್ಞಾನವನ್ನು ಕೊಡಬೇಡ, ನಾನು ಭಗವದಾನಂದವನ್ನು ಅನುಭವಿಸಬೇಕು" ಎಂದು ಕೆಲವೊಮ್ಮೆ ಪ್ರಾರ್ಥಿಸುತ್ತಿದ್ದರು. ಅವರು ಎಲ್ಲರಿಗೂ ಸುಲಭ ಸಾಧ್ಯವಾದ ಪ್ರಾರ್ಥನೆಯ, ನಾಮಸಂಕೀರ್ತನೆಯ ಮಾರ್ಗವನ್ನು ತೋರಿಸಿಕೊಟ್ಟರು.

ಶ್ರೀಮಾತೆಯವರ ಮಾರ್ಗ ಕರ್ಮ. ಅವರು ಶ್ರೀರಾಮಕೃಷ್ಣರಂತೆ ತಪಸ್ಸನ್ನಾಚರಿಸಲಿಲ್ಲ, ಸ್ವಾಮೀಜಿಯಂತೆ ಪಾಂಡಿತ್ಯವನ್ನು ಹೊಂದಿರಲಿಲ್ಲ. ಅವರು ದಿನನಿತ್ಯದ ಕೌಟುಂಬಿಕ ಕಾರ್ಯಗಳನ್ನು ನೆರವೇರಿಸುತ್ತ ಶಾಂತ ನಿರಾಡಂಬರ ಜೀವನವನ್ನು ನಡೆಸಿದರು. ಅವರ ಎಲ್ಲ ಕಾರ್ಯಗಳ ಹಿಂದೆ ಇದ್ದ ನಿಸ್ಪೃಹತೆಯ ಭಾವ ಅವರ ಒಡನಾಡಿಗಳಿಗೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಬಾಲ್ಯಕಾಲದಿಂದ ಹಿಡಿದು ಕೊನೆಗಾಲದವರೆಗೂ ಅವರ ಜೀವನ ಕರ್ಮಮಯವಾಗಿತ್ತು. ಅವರ ವೃದ್ಧ ವಯಸ್ಸಿನಲ್ಲಿ ಅನೇಕರು ಅವರ ಸಹಾಯಕ್ಕಿದ್ದರೂ ಅವರು ಕಾರ್ಯವಿಮುಖರಾಗಲಿಲ್ಲ. ಅವರು ಎಲ್ಲ ಕೆಲಸವನ್ನೂ ಉಚ್ಚ ನೀಚ ಭೇದವಿಲ್ಲದೆ ಸಂಪೂರ್ಣ ಮನಸ್ಸನ್ನಿಟ್ಟು ಮಾಡುತ್ತಿದ್ದರು ಮತ್ತು ಆ ಕೆಲಸದಲ್ಲೇ ಮಹದಾನಂದವನ್ನು ಪಡೆಯುತ್ತಿದ್ದರು. ಕರ್ಮದ ವಿಚಾರವಾಗಿ ಅವರು ಹೀಗೆ ಹೇಳುತ್ತಾರೆ:

"ಶ್ರೀರಾಮಕೃಷ್ಣರ ಕೆಲಸವನ್ನು ಮಾಡು. ಜೊತೆಗೇ ಆಧ್ಯಾತ್ಮಿಕ ಸಾಧನೆಯನ್ನೂ ಮಾಡಿಕೊಂಡು ಬಾ. ಕೆಲಸ ಮಾಡುವುದರಿಂದ ಇಲ್ಲಸಲ್ಲದ ಆಲೋಚನೆಗಳು ದೂರವಾಗುತ್ತವೆ.... ಕೆಲಸ ಮಾಡದೇ ಇದ್ದರೆ ಮನಸ್ಸು ಸರಿಯಾಗಿರಲು ಹೇಗೆ ಸಾಧ್ಯ? ದಿನದ ಇಪ್ಪತ್ನಾಲ್ಕು ಗಂಟೆಯೂ ಯಾರೂ ಧ್ಯಾನ-ಚಿಂತನೆಗಳಲ್ಲಿ ತೊಡಗಿರಲು ಸಾಧ್ಯವಿಲ್ಲ. ಆದ್ದರಿಂದ ಕೆಲಸ ಮಾಡುತ್ತಿರಬೇಕು. ಇದರಿಂದ ಮನಸ್ಸು ಲವಲವಿಕೆಯಿಂದ ಇರುತ್ತದೆ... ಕರ್ಮ ಮಾಡಬೇಕು. ಕರ್ಮದಿಂದ ಮಾತ್ರವೇ ಕರ್ಮಬಂಧನದಿಂದ ಪಾರಾಗಲು ಸಾಧ್ಯ—ಕರ್ಮಮಾಡದೇ ಇರುವುದರಿಂದಲ್ಲ. ಪೂರ್ಣ ಅನಾಸಕ್ತಿ ಆಮೇಲೆ ಬರುತ್ತದೆ. ಒಂದು ಕ್ಷಣವೂ ಕೂಡ ಕರ್ಮ ಮಾಡದೆ ಕುಳಿತಿರಬಾರದು... ಮನಸ್ಸನ್ನು ಸುಮ್ಮನೆ ಎಲ್ಲೆಲ್ಲೋ ಅಲೆಯಲು ಬಿಡುವುದಕ್ಕಿಂತ ಕೆಲಸ ಮಾಡುವುದು ಒಳ್ಳೆಯದು. ಮನಸ್ಸಿಗೆ ಅಲೆಯಲು ಅವಕಾಶ ಸಿಕ್ಕರೆ ಇಲ್ಲದ ಗೊಂದಲ ಉಂಟಾಗುತ್ತದೆ. ಇದನ್ನೆಲ್ಲ ಆಲೋಚಿಸಿಯೇ ನನ್ನ ನರೇನ್ (ವಿವೇಕಾನಂದರು) ಇಂಥ ಸಂಸ್ಥೆಗಳನ್ನು ಕಟ್ಟಿ ಒಳ್ಳೆಯದನ್ನು ಮಾಡಿದ —ಇಲ್ಲಿ ಜನ ನಿಃಸ್ವಾರ್ಥಸೇವೆ ಮಾಡಲಿ ಎಂದು."

"ನರೇಂದ್ರ ಯಾವಾಗಲೂ ಜ್ಞಾನದ ಖಡ್ಗವನ್ನು ಝಳಪಿಸುತ್ತಿರುತ್ತಾನೆ" ಎಂದು ವಿವೇಕಾನಂದರ ಬಗ್ಗೆ ಶ್ರೀರಾಮಕೃಷ್ಣರು ಹೇಳುತ್ತಾರೆ. ನರೇಂದ್ರನು ಜ್ಞಾನಯೋಗ ಸಾಧನೆಗೆ ಅರ್ಹ ವ್ಯಕ್ತಿಯೆಂದು ಭಾವಿಸಿ ಆ ಮಾರ್ಗದಲ್ಲಿ ಅವರು ಅವನನ್ನು ತೊಡಗಿಸಿ ಮಾರ್ಗದರ್ಶನ ನೀಡುತ್ತಾರೆ. ವಿವೇಕಾನಂದರು ಎಲ್ಲ ಯೋಗಗಳ ಬಗ್ಗೆ ಮಾತನಾಡಿದರೂ ಅವರ ಜೀವನ ಮತ್ತು ಬೋಧನೆಯ ಮುಖ್ಯ ಶ್ರುತಿ ಜ್ಞಾನವೆಂಬುದು ಸುಸ್ಪಷ್ಟ. ಜ್ಞಾನಯೋಗದ ಮೇಲೆ ಅವರ ಉಪನ್ಯಾಸಗಳನ್ನು ಓದುವಾಗ ಅವರ ವ್ಯಕ್ತಿತ್ವದ ಅತ್ಯುತ್ಕೃಷ್ಟ ಮುಖವು ನಮ್ಮ ಎದುರಿಗೆ ಎದ್ದು ಕಾಣುತ್ತದೆ. ಅವರು ತಮ್ಮ ಥಳಥಳಿಸುವ ಜ್ಞಾನಖಡ್ಗವನ್ನು ಬೀಸುವ ವೇಗಕ್ಕೆ ಮಿಂಚಿನಂತೆ ಹೊರಬರುವ ಪ್ರದೀಪ್ತ ಭಾವನೆಗಳು ಓದುಗರಲ್ಲಿ ವಿದ್ಯುತ್ಸಂಚಾರವನ್ನುಂಟುಮಾಡುತ್ತವೆ. ಆ ಮೊನಚಾದ ಖಡ್ಗಧಾರೆ ನಮ್ಮ ಮಾಯಾವರಣವನ್ನು ಸೀಳಿ ಹೃದಯಾಂತರಾಳವನ್ನು ಹೊಕ್ಕಂತೆ ಭಾಸವಾಗುತ್ತದೆ. ಅವರ ಅಂತಃಸತ್ತ್ವವೇ ವಾಕ್ಪ್ರವಾಹದ ರೂಪದಲ್ಲಿ ಮೈತಳೆದು ಬಂದಂತೆನಿಸುತ್ತದೆ. ಜ್ಞಾನಮಯ ಪ್ರದೀಪದಂತಿರುವ ಅವರ ವ್ಯಕ್ತಿತ್ವವೇ ಪ್ರೋಜ್ಜ್ವಲ ಭಾವನೆಗಳಂತೆ ಅಭಿವ್ಯಕ್ತವಾಗುತ್ತಿರುವಂತೆ ಅರಿವಾಗುತ್ತದೆ. ಯಾವ ಓದುಗನಿಗಾದರೂ ಆ ಜ್ವಲಂತ ಭಾವನೆಗಳ ಬಿಸಿ ತಾಕದಿರದು, ಈ ಮಾಯಾ ಪ್ರಪಂಚದ ನಗ್ನಸತ್ಯದ ಯಥಾರ್ಥಚಿತ್ರ ಮನಸ್ಸಿಗೆ ಹೊಳೆಯದೇ ಇರದು, ಅದರ ಹಿನ್ನೆಲೆಯಲ್ಲಿ ಆತ್ಮನ ವೈಭವವು ಕಣ್ಣಿಗೆ ಕಟ್ಟಿದಂತೆ ಮೂಡಿಬರುವುದರ ಅರಿವುಂಟಾಗದೆ ಇರದು, ಮತ್ತು ಈ ಜ್ಞಾನಗಂಗೆಯಲ್ಲಿ ಮಿಂದ ಧನ್ಯತೆಯ ಭಾವ ಮನಸ್ಸಿಗುಂಟಾಗದೇ ಇರದು.

ಅವರು ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯ ನೀಡುವುದಕ್ಕೆ ಕಾರಣ ಧರ್ಮವನ್ನು ಮೂಢನಂಬಿಕೆಗಳಿಂದ ಮುಕ್ತಗೊಳಿಸುವುದು, ಮತ್ತು ಧರ್ಮಕ್ಕೆ ಒಂದು ವೈಜ್ಞಾನಿಕ ಹಿನ್ನೆಲೆಯನ್ನು ಒದಗಿಸಿ ಅದನ್ನು ಆಧುನಿಕ ವಿದ್ಯಾವಂತರಿಗೂ ಸ್ವೀಕಾರಯೋಗ್ಯವನ್ನಾಗಿ ಮಾಡುವುದು. ಜ್ಞಾನವಿಹೀನ ಭಕ್ತಿ ಕೇವಲ ಭಾವೋದ್ವೇಗದ ಹುಚ್ಚಾಟವಾಗುತ್ತದೆ ಎಂಬುದು ಅವರ ಅಭಿಪ್ರಾಯ. ಹಾಗೆಯೇ ಜ್ಞಾನದ ಹಿನ್ನೆಲೆಯಿಲ್ಲದ ಕರ್ಮ ಕೇವಲ ಯಾಂತ್ರಿಕ ಕ್ರಿಯೆಯಾಗುತ್ತದೆ. ಆದ್ದರಿಂದ ವಿವೇಕಾನಂದರು ವೈಚಾರಿಕತೆಗೆ ಹೆಚ್ಚು ಒತ್ತನ್ನು ನೀಡಿದರು. ವೈಚಾರಿಕತೆಯ ಇನ್ನೊಂದು ಪ್ರಯೋಜನವೆಂದರೆ ಪಂಥೀಯ, ಮತೀಯ ಸಂಕುಚಿತ ಭಾವನೆಯನ್ನು ಅದು ಹೋಗಲಾಡಿಸುವುದು.

**ಭಕ್ತಿ, ಕರ್ಮ ಮತ್ತು ಜ್ಞಾನ—ಈ ಮೂರೂ ನಮಗೆ ಆವಶ್ಯಕ. ಕರ್ಮಯೋಗದ ಆದರ್ಶಾನುಸಾರ ನಮ್ಮ ವ್ಯಾವಹಾರಿಕ ಜೀವನವನ್ನು ನಡೆಸುತ್ತ, ಭಕ್ತಿಯ ಮೂಲಕ ಭಗವಂತನನ್ನು ಆರಾಧಿಸುತ್ತ, ಜ್ಞಾನಾಗ್ನಿಯಲ್ಲಿ ನಮ್ಮ ಮೌಢ್ಯಗಳನ್ನು ಭಸ್ಮೀಗೊಳಿಸುತ್ತ ಈ ಪ್ರಪಂಚದಲ್ಲಿ ನಾವು ಜೀವನವನ್ನು ನಿರ್ವಹಿಸಬೇಕಾಗಿದೆ.**

(ಮುಂದುವರಿಯುತ್ತದೆ.)